ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 6, January-February 2023, Pp. 42-45
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕರಡಿ ಕಲಂದರರ ಪ್ರದರ್ಶನ ಕಲೆ

**ಸಂಗೀತ ಕೆ[*]**

[*]ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***

*ಭಾರತೀಯ ಸಮಾಜವು ಬಹು ಸಂಸ್ಕೃತಿಗಳ ನಾಡಾಗಿದೆ. ಇಲ್ಲಿ ಹಲವಾರು ಜಾತಿ ಜನಾಂಗ ಧರ್ಮಗಳು ನೆಲೆಗೊಂಡಿದ್ದು, ತಮ್ಮದೇಯಾದ ಜೀವನ ಶೈಲಿಯನ್ನು ರೂಢಿಸಿಕೊಂಡು ಸಾಗುತ್ತಿವೆ. ಇಂದಿಗೂ ಅನೇಕ ಅಲೆಮಾರಿ ಸಮುದಾಯಗಳು ತಂತ್ರಜ್ಞಾನದ ಅಭಿವೃದ್ಧಿ ಹಾಗೂ ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿಯೂ ಕೂಡ ತಮ್ಮ ಜೀವನೋಪಾಯಕ್ಕಾಗಿ ಸಾಂಪ್ರದಾಯಿಕ ಕಲೆಗಳನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅಂತಹ ಸಮುದಾಯಗಳಲ್ಲಿ ಕರಡಿ ಕಲಂದರರು ಕೂಡ ಒಂದಾಗಿದ್ದು, ಇವರು ತಮ್ಮದೇ ಆದ ವಿಶಿಷ್ಟ ಕಲೆಯ ಮೂಲಕ ಮನೆ ಮಾತಾಗಿದ್ದಾರೆ.*

**Keywords:** *ಜಾನಪದ ಕಲೆ, ಸಾಂಪ್ರದಾಯಿಕ ಕಲೆಗಳು, ಕರಡಿ ಕಲಂದರರು.*

## ಪೀಠಿಕೆ

ಕರಡಿ ಕಲಂದರರು ತಮ್ಮ ಪ್ರದರ್ಶನ ಕಲೆಯಿಂದ ಜೀವನವನ್ನು ಪ್ರದರ್ಶಿಸುವ ಮೂಲಕ ಬದುಕನ್ನು ನಡೆಸುತ್ತಿದ್ದರು. ಆದರೆ ಜನಪದ ಕಲೆಗಳಲ್ಲಿ ಒಂದಾದ ಕರಡಿ ಆಡಿಸುವುದು ಇಂದು ನಶಿಸಿ ಹೋಗಿದೆ. ಇತ್ತೀಚಿನ ವರ್ಷಗಳಲ್ಲಿ ಕರಡಿ ಆಡಿಸುವುದು ಅಪರಾಧವಾಗಿದೆ. 1972 ರಲ್ಲಿ ಜಾರಿಗೆ ಬಂದ ವನ್ಯಜೀವಿ ಸಂರಕ್ಷಣಾ ಕಾಯಿದೆ ಜಾರಿಗೆ ಬಂದ ನಂತರ ಕರಡಿ ಕಲಂದರರು ತಮ್ಮ ಕರಡಿ ಕುಣಿತ ಕಲೆಯಿಂದ ದೂರ ಉಳಿಯುವ ಅನಿವಾರ್ಯ ಬಂದೊದಗಿತು. ಪ್ರಸ್ತುತ ದಿನಗಳಲ್ಲಿ ಈ ಕಲೆಯು ಕಣ್ಣಿಗೂ ಕಾಣದಂತೆ ನಶಿಸಿ ಹೋಗಿದೆ. ಕರಡಿ ಕಲಂದರರು ತಮ್ಮದೇ ಭಾಷೆ ಮೂಲಕ ಕರಡಿಯನ್ನು ಬಳಸಿಕೊಂಡು ಅದು ಮರಿ ಇದ್ದಾಗಲೇ ಅದಕ್ಕೆ ಕರಡಿ ಕುಣಿತವನ್ನು ಕಲಿಸುತ್ತಿದ್ದರು. ಕರಡಿಯಷ್ಟೇ ಪರಿಚಿತರು ಕರಡಿ ಕಲಂದರರಾಗಿದ್ದರು. ಕರಡಿ ಆಡಿಸುವ ಇವರನ್ನು ಜನರೇ ಕರೆದು ಕರಡಿ ಆಡಿಸುತ್ತಿದ್ದರು. ಇದಕ್ಕೆ ಪ್ರತಿಯಾಗಿ ದವಸ ಧಾನ್ಯ ಹಾಗೂ ಹಣವನ್ನು ನೀಡುತ್ತಿದ್ದರು. ಆದರೆ ಇಂದು ಕಲೆ ನಶಿಸಿ ಹೋಗಿದ್ದು, ಈ ಕಲೆಯನ್ನು ನೆಚ್ಚಿಕೊಂಡು ಜೀವನ ನಡೆಸುತ್ತಿದ್ದವರ ಬದುಕು ಅತಂತ್ರ ಸ್ಥಿತಿಯಲ್ಲಿದೆ.

## ಅಧ್ಯಯನದ ಉದ್ದೇಶಗಳು

- ಕರಡಿ ಕಲಂದರ ಕಲೆಯನ್ನು ತಿಳಿದುಕೊಳ್ಳುವುದು.
- ಕರಡಿ ಕಲಂದರರ ಪ್ರದರ್ಶನ ವಿಧಾನವನ್ನು ಕಂಡುಕೊಳ್ಳುವುದು.

***Please cite this article as:*** ಸಂಗೀತ ಕೆ. (2023). ಕರಡಿ ಕಲಂದರರ ಪ್ರದರ್ಶನ ಕಲೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(6), 42–45.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಕೊಪ್ಪಳ ಜಿಲ್ಲೆಯ ಮಂಗಳಾಪುರವನ್ನು ಆಯ್ಕೆ ಮಾಡಿಕೊಂಡು ಅಲ್ಲಿ ವಾಸಿಸುವ ಕರಡಿ ಕಲಂದರರನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

**ಅಧ್ಯಯನ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಸಂದರ್ಶನ ವಿಧಾನ, ಸಹಭಾಗಿತ್ವ ಅವಲೋಕನ, ಕ್ಷೇತ್ರಕಾರ್ಯ, ವಿಧಾನಗಳನ್ನು ಬಳಸಿಕೊಳ್ಳಲಾಗಿದೆ.

**ಅಧ್ಯಯನದ ಮಹತ್ವ**

ಕರಡಿ ಕಲಂದರ ಕಲೆಯು ಒಂದು ಪ್ರಮುಖ ಜನಪದ ಕಲೆಯಾಗಿದ್ದು, ಅದನ್ನು ತಲತಲಾಂತರಗಳಿಂದ ಪ್ರದರ್ಶನ ಮಾಡಿಕೊಂಡು ಬಂದಿದ್ದಾರೆ. ಕರಡಿಯು ಸೂಚನೆಗೆ ಅನುಗುಣವಾಗಿ ಹೇಗೆ ನರ್ತಿಸಬೇಕು ಎಂಬುದನ್ನು ಮರಿಯಿದ್ದಾಗಲೇ ತರಬೇತಿ ನೀಡುತ್ತಿದ್ದರು. ಕಲದಂದರರು ತಮ್ಮದೇ ಭಾಷೆಯಲ್ಲಿ ಕಲಿಸುತ್ತಿದ್ದರು. ಆದರೆ ಕಾನೂನು ಕಾಯ್ದೆಗಳಿಂದಾಗಿ ಇಂದು ಈ ಕಲೆಯು ನಶಿಸಿ ಹೋಗಿದ್ದು, ಈ ಕಲೆಯನ್ನೇ ನಂಬಿಕೊಂಡು ಜೀವನ ನಡೆಸುತ್ತಿದ್ದವರ ಬದುಕು ಅತಂತ್ರವಾಗಿದ್ದು, ಪ್ರಸ್ತುತ ಇವರ ಸ್ಥಿತಿಗತಿ ಹೇಗಿದೆ ಎಂಬುದನ್ನು ಈ ಅಧ್ಯಯನದಿಂದ ತಿಳಿದುಕೊಳ್ಳಬಹುದಾಗಿದೆ.

**ಅಲೆಮಾರಿ ಸಮುದಾಯಗಳು**

ಅಲೆಮಾರಿ ಸಮುದಾಯಗಳ ವೃತ್ತಿ ಮತ್ತು ಕಲೆಗಳ ಆಧಾರದ ಮೇಲೆ ಪ್ರದರ್ಶಕ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳು, ಕರಕುಶಲ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳು, ಧಾರ್ಮಿಕ ಸಂಬಂಧಿ ವೃತ್ತಿಗಳನ್ನು ಅವಲಂಬಿಸಿರುವ ಸಮುದಾಯಗಳು, ಪಾರಂಪರಿಕ ಮೂಲ ವೃತ್ತಿಗಳಲ್ಲಿ ಇರುವ ಸಮುದಾಯಗಳು ಹಾಗೂ ಬೇಟೆ ಪಶುಪಾಲನೆ ಮತ್ತು ಅಹಾರ ಸಂಗ್ರಹಣೆಯಂತಹ ಕೆಲಸಗಳನ್ನು ಅವಲಂಬಿಸಿರುವ ಸಮುದಾಯಗಳು ಎಂದು ವಿಂಗಡಿಸಿಕೊಳ್ಳಬಹುದಾಗಿದೆ. (ರಮೇಶ್, 2005). ಇವುಗಳಲ್ಲಿ ಪ್ರದರ್ಶನ ಕಲೆಗಳನ್ನು ಅವಲಂಬಿಸಿರುವ ಸಮುದಾಯಗಳ ಪೈಕಿ ಡೊಂಬರು, ಜಾತಿಗಾರರು, ಹಗಲುವೇಷಗಾರರು, ಕವಲೆತ್ತಿನವರು, ದೊಂಬಿದಾಸರು, ಕಿನ್ನರಿ ಜೋಗಿಗಳು, ಬುಡುಬುಡುಕೆಯವರು, ಮೂಡಿಕಾರರು ಹಾಗೂ ಕರಡಿ ಕಲಂದರರು ಪ್ರಮುಖವಾದವುಗಳಾಗಿವೆ. ಸಮುದಾಯವು ಪ್ರದರ್ಶಕ ಕಲೆಯನ್ನು ಅವಲಂಬಿಸಿರುವ ಸಮುದಾಯವಾಗಿದೆ. ಕರಡಿ ಕಲಂದರರು ಕರಡಿಯ ಕಲೆಯನ್ನು ಅವಲಂಬಿಸಿಕೊಂಡು ಜೀವನ ದೂಡುವವರಾಗಿದ್ದಾರೆ.

**ಕರಡಿ ಪ್ರದರ್ಶನ ಕಲೆ**

ಕರಡಿ ಪ್ರದರ್ಶನವು ಕರಡಿ ಕಲಂದರರ ಬದುಕಿಗೆ ಆಧಾರವಾಗಿದ್ದ ವೃತ್ತಿಯಾಗಿತ್ತು. ಕರಡಿ ಕೂದಲು ಬಳಸಿ ತಾಯಿತ ಮಾಡಿ ಕಟ್ಟುವುದರ ಮೂಲಕ ಅನೇಕ ಮಾನಸಿಕ ಕಾಯಿಲೆಗಳನ್ನು ಗುಣಪಡಿಸುತ್ತಿದ್ದರು. ಮೈ ಕೈ ನೋವು, ಮಕ್ಕಳಲ್ಲಿರುವ ಭಯ, ಅತಿಯಾದ ಹಠ, ರಾತ್ರಿವೇಳೆ ಮೂತ್ರ ಮಾಡಿಕೊಳ್ಳುವಂತಹ ಅನೇಕ ಕಾಯಿಲೆಗಳನ್ನು ಗುಣಪಡಿಸುವುದರ ಜೊತೆಗೆ ಮನೋರಂಜನೆಯನ್ನು ನೀಡುತ್ತಿದ್ದರು.

ಕರಡಿ ಕಲಂದರರು ತಮ್ಮ ಹಿರಿಯರು ಹಾಕಿಕೊಟ್ಟ ಹಾದಿಯಲ್ಲಿ ತಮ್ಮ ವೃತ್ತಿಯನ್ನು ತಲೆಮಾರಿನಿಂದ ತಲೆಮಾರಿಗೆ ಸಾಗಿಸಿಕೊಂಡು ಬರುತ್ತಿದ್ದರು. ಕಲಂದರರು ಅಲೆಮಾರಿಗಳಾಗಿದ್ದು ಊರಿಂದ ಊರಿಗೆ ನಗರಪ್ರದೇಶಗಳಿಗೆ ಹೋಗಿ ತಮ್ಮ ಕಲೆಯನ್ನು ಪ್ರದರ್ಶಿಸುತ್ತಿದ್ದರು. ಸಲಾಂ ಹೊಡೆಯುವುದು, ಗೌಡರು ಗಂಭೀರವಾಗಿ ಓಡಾಡುವುದನ್ನು ಅನುಕರಣೆ ಮಾಡುವುದು, ದನ ಕಾಯುವುದು, ಕುಸ್ತಿಯನ್ನು ಆಡುವ ಸಂದರ್ಭದಲ್ಲಿ ತೋರಿಸುವ ಕಸರತ್ತು, ಮನುಷ್ಯನಂತೆ ನಿಲ್ಲುವುದು ಮುಂತಾದವುಗಳನ್ನು ಕರಡಿಗಳು ಪ್ರದರ್ಶಿಸುತ್ತಿದ್ದವು.

ಕರಡಿಯ ಕಲೆಯನ್ನು ಪ್ರದರ್ಶಿಸುವ ಕಲಂದರರ ಉಡುಗೆ ಅತ್ಯಂತ ವಿಶಿಷ್ಟವಾಗಿರುತ್ತದೆ. ಕಪ್ಪುಬಣ್ಣದ ಕರಿಕೋಟು ಧರಿಸಿದ್ದು ತಲೆಗೆ ರುಮಾಲು ಕಟ್ಟಿಕೊಂಡಿರುತ್ತಾನೆ. ಬಲಗೈ ಮುಂಗೈಗೆ ಕಬ್ಬಿಣದ ಬಳೆ ಹಾಕಿಕೊಂಡಿದ್ದು ಕೈಯಲ್ಲಿ ಇನ್ನೊಂದು ಕೈಯಲ್ಲಿ ದೊಣ್ಣೆ ಹಿಡಿದಿರುತ್ತಾನೆ. ಕರಡಿಯ ಕಬ್ಬಿಣದ ಬಳೆಯ ವಾದ್ಯಕ್ಕೆ ಹೆಜ್ಜೆ ಹಾಕುತ್ತ ಕುಣಿಯುತ್ತದೆ. ಗಂಡನ ಮನೆಗೆ ಹೆಣ್ಣು ಹೋಗುವಾಗ ಅಳುವ ದೃಶ್ಯವನ್ನು ಭಾವನಾತ್ಮಕವಾಗಿ ತೋರಿಸುವುದು. ಗಂಡನ ಮನೆಯಿಂದ ತವರು ಮನೆಗೆ ಹೋಗುವಾಗ ಹೆಣ್ಣಿಗೆ ಇರುವ ಸಂಭ್ರಮ, ಸಡಗರವನ್ನು ತೋರಿಸುವುದು ಹೀಗೆ ವಿವಿಧ ಕಲೆಗಳನ್ನು ಪ್ರದರ್ಶಿಸುವುದರ ಮುಖೇನ ಜನರನ್ನು ರಂಜಿಸುತ್ತಾರೆ.

**ಕರಡಿ ಕಲಂದರರ ಪ್ರದರ್ಶನ ಕಲೆ ನಶಿಸಿ ಹೋಗಲು ಕಾರಣಗಳು**

ಕಲಂದರರಿಗೆ ಕರಡಿಯನ್ನು ಸಾಕಲು 1972 ಮುಂಚೆ ಯಾವುದೇ ನಿರ್ಬಂಧವಿರಲಿಲ್ಲ. ಆದರೆ ಕರಡಿ ಕಲಂದರರ ವೃತ್ತಿಗೆ ಕಳೆದ ಕೆಲವು ವರ್ಷಗಳಲ್ಲಿ ಆತಂಕ ಎದುರಾಯಿತು. ವನ್ಯಜೀವಿ ಸಂರಕ್ಷಣಾ ಕಾಯ್ದೆಯು (1972) ಬಂದ ನಂತರ ಇವರ ವೃತ್ತಿಗೆ ಭಾರಿ ಪೆಟ್ಟು ಬಿದ್ದಿತು. ಈ ಕಾಯ್ದೆಯ ಪ್ರಕಾರ ಕರಡಿಯನ್ನು ಎಫ್–1 ಶೆಡ್ಯೂಲಿಗೆ ಸೇರಿಸಲಾಯಿತು. ಇಲ್ಲಿ ನಶಿಸಿಹೋಗುವ ಹೋಗುವ ಪ್ರಾಣಿಗಳ ಪಟ್ಟಿಯಲ್ಲಿ ಕರಡಿಯು ಇದ್ದ ಕಾರಣ, ಈ ಪ್ರಾಣಿಯನ್ನು ಹೊಂದುವುದು ಅಪರಾಧವಾಗಿರುತ್ತದೆ. ಕೋಲಾರ, ವಿಜಯನಗರ ಜಿಲ್ಲೆಗಳಲ್ಲಿ ವಾಸಿಸುವ ಕಲಂದರರಿಗೆ ಸರ್ಕಾರವು 1984ರಲ್ಲಿ 35 ಜನರಿಗೆ ಕರಡಿ ಆಡಿಸಲು ಪರವಾನಿಗೆಯನ್ನು ನೀಡಿತು. ಆದರೆ 2003 ನಂತರದಲ್ಲಿ ಈ ಪರವಾನಿಗೆಯನ್ನು ನವೀಕರಣ ಮಾಡದೇ ರದ್ದು ಮಾಡಿತು. ಈ ಕಾಯ್ದೆ ಪ್ರಕಾರ ಕರಡಿಯನ್ನು ಹೊಂದುವುದು ಅಪರಾಧಾಗಿರುತ್ತದೆ.

**ಪರಿಣಾಮಗಳು**

ಮೂಲತಃ ಅಲೆಮಾರಿಗಳಾದ ಕರಡಿ ಕಲಂದರರು ಕರಡಿ ಪ್ರದರ್ಶನ ಮಾಡಿ ಜೀವನ ಸಾಗಿಸುತ್ತಿದ್ದರು. ಪ್ರತಿ ಕುಟುಂಬವು ಒಂದು ಅಥವಾ ಎರಡಕ್ಕೂ ಹೆಚ್ಚು ಕರಡಿಯನ್ನು ಹೊಂದಿದ್ದರು. ಶತಮಾನಗಳಿಂದಲೂ ಕರಡಿಯಾಡಿಸುತ್ತಾ ಬಂದಿದ್ದ ಕಲಂದರರು 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆ ಪರಿಣಾಮವಾಗಿ ಇವರು ಕರಡಿಯಾಡಿಸವ ವೃತ್ತಿಯನ್ನು  ನಿಲ್ಲಿಸಬೇಕಾಯಿತು. ಮೂಲತ: ಅಲೆಮಾರಿಗಳಾಗಿದ್ದ ಸ್ವಂತ ನೆಲೆಯಿಲ್ಲದೆ ನಿರ್ಗತಿಕರಾದರು. ಕರಡಿಯಾಡಿಸುವುದನ್ನು ಬಿಟ್ಟರೆ ಬೇರೆ ಯಾವ ವೃತ್ತಿಯೂ ಗೊತ್ತಿರದ ಇವರು ಉದ್ಯೋಗವನ್ನು ಕಳೆದುಕೊಂಡು ನಿರೋದ್ಯೋಗಿಗಳಾದರು.

**ಉಪಸಂಹಾರ**

ಕರಡಿ ಕಲೆಯು ಪರಂಪರಾಗತವಾಗಿ ಜನರನ್ನು ರಂಜಿಸುತ್ತಾ ಟಿವಿ, ಮೊಬೈಲ್, ಬಹು ಮಾಧ್ಯಮಗಳ ಪ್ರಭಾವ ಇರದಂತಹ ಕಾಲದಲ್ಲಿ ಬಹು ಬೇಡಿಕೆಯ ಪ್ರದರ್ಶನ ಕಲೆಯಾಗಿತ್ತು. ಆದರೆ

ಇಂದು ಆಧುನಿಕತೆಯ ಪ್ರಭಾವದಿಮದ ಈ ವೃತ್ತಿಗಳು ಕಣ್ಮರೆಯಾಗಿವೆ. ಕರಡಿ ಪ್ರದರ್ಶನ ಕಲೆಯನ್ನು ಇತಿಹಾಸದಲ್ಲಿ ಉಳಿಯುವಂತೆ ಮಾಡಿದ ಆ ಸಮುದಾಯವಿಂದು ಸಂಕಷ್ಟದಲ್ಲಿ ಜೀವನ ಸಾಗಿಸುತ್ತಿದೆ. ಹಾಗಾಗಿ ಕರಡಿ ಪ್ರದರ್ಶನ ಕಲೆಯನ್ನು ನಂಬಿಕೊಂಡು ಜೀವನ ನಡೆಸುತ್ತಿದ್ದ ಸಮುದಾಯದವರಿಗೆ ಸರ್ಕಾರವು ಉದ್ಯೋಗ ತರಬೇತಿ ನೀಡಿ ಉದ್ಯೋಗ ಕಲ್ಪಿಸಿ ಸುಗಮವಾಗಿ ಜೀವನ ಸಾಗಿಸಲು ಅನುವು ಮಾಡಿಕೊಡುವುದು ಅಗತ್ಯವಾಗಿದೆ.

**ವಕ್ತೃ ವಿವರ**

- ಹುಸೇನ್ ಸಾಬ್ ತಂದೆ ಅಮೀನ್ ಸಾಬ್, 45 ವರ್ಷ, ಮಂಗಳಾಪುರ ಗ್ರಾಮ, ಕೊಪ್ಪಳ ತಾಲೂಕು.
- ಕರಡಿ ಗೌಸ ಸಾಬ್ ತಂದೆ ಮಾಬು ಸಾಬ್, 58 ವರ್ಷ, ಮಂಗಳಾಪುರ ಗ್ರಾಮ, ಕೊಪ್ಪಳ ತಾಲೂಕು.
- ರಾಜಸಾಬ್ ತಂದೆ ಹುಸೇನ್ ಸಾಬ್, 45 ವರ್ಷ, ಮಂಗಳಾಪುರ ಗ್ರಾಮ, ಕೊಪ್ಪಳ ತಾಲೂಕು.

**ಪರಾಮರ್ಶನ/ಆಧಾರ ಗ್ರಂಥಗಳು**


- ರಮೇಶ್ ಸ ಚಿ (ಸಂ.). (2005). *ಅಲೆಮಾರಿಗಳ ಸ್ಥಿತಿಗತಿ.* ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ.
- ರಾಜೀವ್ ಬಿ ಎಂ ಟಿ, (2014). *ಭಾರತೀಯ ವನ್ಯಜೀವಿ ನಿರ್ವಹಣಾ ಕಲೆ.* ಶ್ರೀ ಕೃಷ್ಣಾ ಪ್ರಕಾಶನ.